# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

# UNIVERSITY OF HORTICULTURAL SCIENCES, BAGALKOT

ದಿನಾಂಕ 21-01-2019 ರಂದು ಬೆಳಿಗ್ಗೆ 11:00 ಗಂಟೆಗೆ ಸಭಾಂಗಣ,
ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು ಇಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ
48ನೇ ಸಭೆಯ ನಡುವಳಿಗಳು

## MINUTES OF 48TH MEETING OF THE BOARD OF MANAGEMENT HELD ON 21-01-2019 AT 11.00 A.M. IN MEETING HALL, COLLEGE OF HORTICULTURE, MYSURU

**ಹಾಜರಾದ ಸದಸ್ಯರು**

**MEMBERS PRESENT**

| | | | |
|---|---|---|---|
| 1. | ಡಾ. ಕೆ. ಎಂ. ಇಂದಿರೇಶ<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟ. | : | ಅಧ್ಯಕ್ಷರು |
| | **Dr. K. M. Indiresh**<br>Vice-Chancellor and Chairman<br>Board of Management, UHS, Bagalkot. | : | Chairman |
| 2. | ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkot<br>Tupalli Village, J. Timmasandra Post<br>Srinivaspur Taluka, Kolar District. | : | Member |
| 3. | ಡಾ. ಎನ್. ರಾಜೇಶ್ವರಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 36, ಬೇವುಬೆಲ್ಲ, 1ನೇ ಕ್ರಾಸ್, ವಿದ್ಯಾನಗರ,<br>ಶಿವಮೊಗ್ಗ-577203. | : | ಸದಸ್ಯರು |
| | **Dr. N. Rajeshwari**<br>Member, Board of Management, UHS, Bagalkot<br>No. 36, Bevubella, 1st Cross, Vidyanagara,<br>Shivamogga-577203. | : | Member |
| 4. | ಶ್ರೀ ಶಂಕರಪ್ಪ ಬಸಪ್ಪ ಮಳಲಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತ್ತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri. Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | : | Member |

| | | | |
|---|---|---|---|
| 5. | ಶ್ರೀ ಎಸ್. ಎನ್. ಮಂಜುನಾಥಗೌಡ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ<br>ದಳಸನೂರು, ಮದನಹಳ್ಳಿ ಪಂಚಾಯಿತು–563126, ತಾಲ್ಲೂಕು ಮತ್ತು<br>ಜಿಲ್ಲೆ: ಕೋಲಾರ. | : | ಸದಸ್ಯರು |
| | **Sri S. N. Manjunathagowda**<br>S/o. Late Nanjappa<br>Member, Board of Management,<br>UHS, Bagalkot<br>Shettymadamangala Village,<br>Velagalaburre Post, Via Dalasanur,<br>Madanahally Panchayath-563126,<br>Tq & Dist : Kolar | : | Member |
| 6. | ಶ್ರೀ ಆರ್. ಎಂ. ನಾಗೇಶ್<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ,<br>ಪಾಪರೆಡ್ಡಿಪಾಳ್ಯ, ನಾಗರಬಾವಿ, ಬೆಂಗಳೂರು–560 072. | : | ಸದಸ್ಯರು |
| | **Sri R. M. Nagesh**<br>Member, Board of Management, UHS, Bagalkot<br>No. 25, Near Jubilee School, Papareddy Palya,<br>Nagarbhavi, Bengaluru-560 072. | : | Member |
| 7. | ಶ್ರೀ ಯೋಗಿರಾಜ ಬಿ. ಪಾಟೀಲ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು", 5ನೇ ಕ್ರಾಸ್, ಕುಸುಮನಗರ ಮುಖ್ಯ<br>ರಸ್ತೆ, ವೈದ್ಯ ಮಠ ಸಂಕೀರ್ಣ ಹಿಂದುಗಡೆ,<br>ಧಾರವಾಡ–580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS, Bagalkot<br>No. 142, "Sadguru", 5th Cross<br>Kusumnagar Main Road, Backside of Vaidya<br>Math Complex, Dharwad-580008. | : | Member |
| 8. | ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶಿವನಗರ, ಸವದತ್ತಿ ರಸ್ತೆ, ಮುರುಘಾ ಮಠದ ಹತ್ತಿರ,<br>ಧಾರವಾಡ – 581208. | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS,<br>Bagalkot, Shivanagar, Savadatti Road,<br>Near Muruga Math,<br>Dharwad-581208. | : | Member |

| | | | |
|---|---|---|---|
| 9. | ಡಾ. ಕೆ. ಎಮ್. ಇಂದಿರೇಶ<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯರು |
| | **Dr. K. M. Indiresh**<br>Director of Education and Member<br>Board of Management, UHS, Bagalkot | : | Member |
| 10. | ಡಾ. ವೈ. ಕೆ. ಕೋಟಿಕಲ್<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ,<br>ಬಾಗಲಕೋಟ | : | ಸದಸ್ಯ<br>ಕಾರ್ಯದರ್ಶಿಗಳು |
| | **Dr. Y. K. Kotikal**<br>Registrar & Member-Secretary,<br>Board of Management,<br>UHS, Bagalkot. | : | Member<br>Secretary |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು ಇವರು ವ್ಯವಸ್ಥಾಪನ ಮಂಡಳಿಯ 48ನೇ ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಕುಲಸಚಿವರು ಇವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಸುದೀರ್ಘ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed members of the Board of Management to the 48th meeting. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations and discussions on the agenda subjects, the following decisions were resolved during the Board meeting.

| | |
|---|---|
| **ಕಾರ್ಯಸೂಚಿ ಸಂಖ್ಯೆ 1** | **ದಿನಾಂಕ 15-10-2018 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 47ನೇ ಸಭೆಯ ನಡುವಳಿಗಳ ಧೃಢೀಕರಣ.** |
| | **ಚರ್ಚೆ ಮತ್ತು ಠರಾವು :**<br>ವ್ಯವಸ್ಥಾಪನಾ ಮಂಡಳಿಯ 47ನೇ ಸಭೆಯ ನಡುವಳಿಗಳ ಮೇಲೆ ನಿಗದಿಪಡಿಸಿದ ದಿನಾಂಕದೊಳಗೆ ಯಾವುದೇ ಸದಸ್ಯರಿಂದ ಸಲಹೆಗಳು/ಟಿಪ್ಪಣಿಗಳು ಸ್ವೀಕೃತವಾಗದ ಕಾರಣ, ಸಭೆಯ ನಡುವಳಿಗಳನ್ನು ಅಳವಡಿಸಿಕೊಳ್ಳಲು ದೃಢೀಕರಿಸಲಾಯಿತು. |
| **Item No.1** | **Confirmation of the minutes of the 47th meeting of the Board of Management held on 15-10-2018.** |
| | **Discussion and Resolution :**<br>As there were no comments received from any of the members within the stipulated date, the minutes of the 47th meeting of Board of Management were confirmed for adoption. |

| | |
|---|---|
| ಕಾರ್ಯಸೂಚಿ ಸಂ.2 | **ದಿನಾಂಕ 15-10-2018 ರಂದು ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 47ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ.** |
| | **ಚರ್ಚೆ ಮತ್ತು ಠರಾವು :**<br>ವ್ಯವಸ್ಥಾಪನಾ ಮಂಡಳಿಯ 47ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಅವಲೋಕಿಸಿತು ಮತ್ತು ಅದರ ಪ್ರಗತಿಗೆ ಮಂಡಳಿಯು ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಕೈಗೊಂಡ ಕ್ರಮಗಳಿಗೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. |
| **Item No.2** | **Action taken report on the minutes of the 47th meeting of Board of Management held on 15-10-2018.** |
| | **Discussion and Resolution :**<br>The Board perused the action taken report and expressed its consent over the progress made. The Board accorded its approval for the actions taken. |
| ಕಾರ್ಯಸೂಚಿ ಸಂ.3 | **ತೋವಿವಿ., ಬಾಗಲಕೋಟದ 8ನೇ ಘಟಿಕೋತ್ಸವದ ಮುಖ್ಯ ಅತಿಥಿಗಳ ಪಟ್ಟಿಯನ್ನು ಅನುಮೋದನೆ ಕುರಿತು.** |
| | **ಚರ್ಚೆ ಮತ್ತು ಠರಾವು:**<br>2019ನೇ ಫೆಬ್ರವರಿಯಲ್ಲಿ ತಾತ್ಕಾಲಿಕವಾಗಿ ದಿನಾಂಕ 15ರ ನಂತರ ಜರುಗಲಿರುವ ತೋವಿವಿ, ಬಾಗಲಕೋಟದ 8ನೇ ಘಟಿಕೋತ್ಸವದ ಮುಖ್ಯ ಅತಿಥಿಗಳ ಪಟ್ಟಿಯನ್ನು ಸದಸ್ಯ ಕಾರ್ಯದರ್ಶಿಗಳು ಸಭೆಗೆ ಮಂಡಿಸಿದರು ಮತ್ತು ಮುಖ್ಯ ಅತಿಥಿಗಳ ಪಟ್ಟಿಯಲ್ಲಿರುವವರ ವಿವರಗಳನ್ನು ಮಂಡಳಿಯು ಅಪೇಕ್ಷಿಸಿತು. ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಇವರುಗಳಿಂದ ಮಾಹಿತಿಯನ್ನು ಪಡೆದ ನಂತರ, ಮಂಡಳಿಯು ಮುಖ್ಯ ಅತಿಥಿಗಳ ಪಟ್ಟಿಗೆ ಕ್ರಮವಾಗಿ ಈ ಕೆಳಗಿನಂತೆ ತನ್ನ ಅನುಮೋದನೆಯನ್ನು ನೀಡಿತು.<br>1. **ಶ್ರೀ ವೆಂಕಯ್ಯ ನಾಯ್ಡು**, ಗೌರವಾನ್ವಿತ ಉಪ ರಾಷ್ಟ್ರಪತಿಗಳು, ಭಾರತ ಸರ್ಕಾರ, ನವ ದೆಹಲಿ<br>2. **ಡಾ. ತ್ರಿಲೋಚನ ಮೊಹಪಾತ್ರ**, ಕಾರ್ಯದರ್ಶಿಗಳು, ಕೃಷಿ ಸಂಶೋಧನಾ ಮತ್ತು ಶಿಕ್ಷಣ ಇಲಾಖೆ ಮತ್ತು ಮಹಾ ಪ್ರಬಂಧಕರು, ಭಾರತೀಯ ಕೃಷಿ ಅನುಸಂದಾನ ಪರಿಷತ್, ನವ ದೆಹಲಿ.<br>3. **ಡಾ. ಕಿರಣ ಮುಜುಂದಾರ**, ಆದ್ಯಕ್ಷರು ಮತ್ತು ವ್ಯವಸ್ಥಾಪ ನಿರ್ದೇಶಕರು, ಬಯೋಕಾನ ಲಿಮಿಟೆಡ್, ಬೆಂಗಳೂರು.<br>4. **ಡಾ. ಆಲೂರ ಸಿಲೀನ ಕಿರಣ ಕುಮಾರ**, ಕಾರ್ಯದರ್ಶಿಗಳು, ಬಾಹ್ಯಾಕಾಶ ಇಲಾಖೆ ಮತ್ತು ಮಾಜಿ ಅಧ್ಯಕ್ಷರು, ಇಸ್ರೋ, ಬೆಂಗಳೂರು.<br>5. **ಡಾ. ಕುಂಬೈ ವಿನೋದ ಪ್ರಭು**, ಅಧ್ಯಕ್ಷರು, ಸಸ್ಯ ವೈವಿಧ್ಯತೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ, ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ, ಭಾರತ ಸರ್ಕಾರ, ನವದೆಹಲಿ.<br>ಮುಂದುವರೆದು, ಮುಖ್ಯ ಅತಿಥಿಗಳ ಪಟ್ಟಿಯನ್ನು ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ನಡುವಳಿಗಳ ದೃಢೀಕರಣಕ್ಕಾಗಿ ಸಲ್ಲಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಕುಲಸಚಿವರು) |

| Item No.3 | **Approval of Panel of Chief Guests for VIII Convocation, UHS, Bagalkot.** |
|---|---|
| | **Discussion & Resolution :**<br><br>The Member Secretary presented the panel of Chief Guest for the VIII Convocation to be held on tentatively 2nd fortnight of February, 2019 and Board desires to know about the credentials of the Chief Guests enlisted in the panel. After getting the information from the Chairman and Member Secretary, the Board approved the panel of Chief Guests in the order as under ;<br><br>1. **Sri Venkaiah Naidu,** Hon'ble Vice-President of India Government of India, New Delhi.<br>2. **Dr. Trilochan Mohapatra,** Secretary, Department of Agricultural Research and Education, Govt. of India & Director General, Indian Council of Agricultural Research, Krishi Bhavan, New Delhi.<br>3. **Dr. Kiran Mujumdar**, Chairperson and Managing Director of Biocon Limited, Bengaluru<br>4. **Dr. Alur Seelin Kiran Kumar,** Secretary, Department of Space and Ex-Chairman, ISRO, Bengaluru<br>5. **Dr. Kumble Vinod Prabhu,** Chairperson, Protection of Plant Varieties and Farmers' Rights, Authority, Govt. of India, Min. of Agriculture &, Farmers Welfare, New Delhi<br><br>Further, the Board directed the University to send panel of Chief Guests to Hon'ble Governor for the kind approval, without waiting for confirmation of the minutes.<br><br>**(Action: Registrar)** |
| ಕಾರ್ಯಸೂಚಿ ಸಂ.4 | ಗೃಹ ವಿಜ್ಞಾನ ವಿಷಯದ ಶಿಕ್ಷಕರುಗಳ ನೇರ ನೇಮಕಾತಿ ಮತ್ತು ಪದೋನ್ನತಿಗಾಗಿ ಬಾಹ್ಯ ತಜ್ಞರ ಪಟ್ಟಿಯನ್ನು ಅನುಮೋದಿಸುವ ಕುರಿತು. |
| | ಚರ್ಚೆ ಮತ್ತು ಠರಾವು :<br><br>ಗೃಹ ವಿಜ್ಞಾನ ವಿಷಯದ ಶಿಕ್ಷಕರುಗಳ ನೇರ ನೇಮಕಾತಿ ಮತ್ತು ಪದೋನ್ನತಿಗಾಗಿ ಬಾಹ್ಯ ತಜ್ಞರ ಪಟ್ಟಿಯನ್ನು ಅನುಮೋದಿಸುವ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಇವರುಗಳಿಂದ ಮಾಹಿತಿಯನ್ನು ಪಡೆದ ನಂತರ, ಮಂಡಳಿಯು ಗೃಹ ವಿಜ್ಞಾನ ವಿಷಯದ ಶಿಕ್ಷಕರುಗಳ ನೇರ ನೇಮಕಾತಿ ಮತ್ತು ಪದೋನ್ನತಿಗಾಗಿ ಬಾಹ್ಯ ತಜ್ಞರ ಪಟ್ಟಿಯನ್ನು ತನ್ನ ಅನುಮೋದನೆಯನ್ನು ನೀಡಿತು ಮತ್ತು ಸಭೆಯಲ್ಲಿ ಚರ್ಚಿಸಿದಂತೆ ಹೊರ ರಾಜ್ಯಗಳ ಬಾಹ್ಯ ತಜ್ಞರಗಳ ಸೂಕ್ತ ಹೆಸರುಗಳನ್ನು ಸಹ ಪಟ್ಟಿಯಲ್ಲಿ ಸೇರ್ಪಡಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಮುಂದುವರೆದು, ಈ ಕುರಿತು ಅಧಿಸೂಚನೆ ಹೊರಡಿಸುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ: ಕುಲಸಚಿವರು) |

| | |
|---|---|
| **Item No.4** | **Panel of External Experts for Direct Recruitment & Promotion of teachers of Home Science discipline – reg.** |
| | **Discussion & Resolution :**<br><br>The Member Secretary presented the panel of External Experts for Direct Recruitment & Promotion of teachers of Home Science discipline. After getting the information from the Chairman and Member Secretary, the Board accorded its approval to the panel of External Experts for Direct Recruitment & Promotion of teachers of Home Science discipline and directed the University to include the names of suitable external experts from out of state also in the list of external experts as discussed in the meeting. Further, Board directed the University to issue notification in this regard.<br><br>**(Action: Registrar)** |
| **ಕಾರ್ಯಸೂಚಿ ಸಂ.5** | **ದಿನಾಂಕ 10-12-2018 ರಂದು ಜರುಗಿದ 20ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು** |
| | **ಚರ್ಚೆ ಮತ್ತು ಠರಾವು :**<br><br>ದಿನಾಂಕ 10-12-2018 ರಂದು ಜರುಗಿದ ಹಣಕಾಸು ಸಮಿತಿಯ 20ನೇ ಸಭೆಯ ನಡುವಳಿಗಳನ್ನು ಮಂಡಳಿಯು ಸುದೀರ್ಘವಾಗಿ ಚರ್ಚಿಸಿ ಸದರಿ ನಡುವಳಿಗಳಿಗೆ ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು ತೋವಿವಿ, ಬಾಗಲಕೋಟದ 20ನೇ ಹಣಕಾಸು ಸಮಿತಿ ಸಭೆಯ ನಡುವಳಿಗಳ ಪ್ರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು) |
| **Item No.5** | **Approval for Proceedings of the 20th Meeting of Finance Committee of UHS, Bagalkot held on 10-12-2018.** |
| | **Discussion & Resolution :**<br><br>The Board discussed the subject at length and accorded its approval for the proceedings of the 20th meeting of Finance Committee of UHS, Bagalkot held on 10-12-2018. Further, Board directed the University to take necessary actions as per the proceedings of the 20th meeting of Finance Committee, UHS, Bagalkot.<br><br>**(Action: Comptroller)** |

| | |
|---|---|
| ಕಾರ್ಯಸೂಚಿ ಸಂ.6 | ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿಗೆ Gas Chromatograph ಖರೀದಿಗಾಗಿ ಟೆಂಡರ್ ಆಹ್ವಾನಿಸಲು ಅನುಮೋದನೆ ಕುರಿತು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿಗೆ Gas Chromatograph ಖರೀದಿಗಾಗಿ ಟೆಂಡರ್ ಆಹ್ವಾನಿಸಲು ಅನುಮೋದನೆ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ, ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರಿಗೆ Gas Chromatograph ಅವಶ್ಯಕತೆಯನ್ನು ಪರಿಗಣಿಸಿ, ಮಂಡಳಿಯು ಕಾರ್ಯಸೂಚಿಯಲ್ಲಿ ಮಂಡಿಸಿರುವಂತೆ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೇ ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>(ಕ್ರಮ : ಆಸ್ತಿ ಅಧಿಕಾರಿಗಳು) |
| **Item No.6** | **Approval to invite tender for purchase of Gas Chromatography for College of Horticulture, Bengaluru – reg.** |
| | **Discussion & Resolution :**<br>The Board examined the proposal to invite tender for purchase of Gas Chromatography for College of Horticulture, Bengaluru. After detailed deliberations and considering the essentiality of Gas Chromatography for College of Horticulture, Bengaluru, the Board accorded its approval for proposal as put up in the agenda and directed the University to invite the tender as per norms of UHS and KTPP Act, without waiting for confirmation of the minutes.<br>**(Action : Estate Officer)** |
| ಕಾರ್ಯಸೂಚಿ ಸಂ.7 | ತೋವಿವಿ, ಬಾಗಲಕೋಟದಲ್ಲಿ "ಸಿ" ಮತ್ತು "ಡಿ" ಗುಂಪಿನ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>ತೋವಿವಿ, ಬಾಗಲಕೋಟದಲ್ಲಿ "ಸಿ" ಮತ್ತು "ಡಿ" ಗುಂಪಿನ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಟೆಂಡರ್ ಆಹ್ವಾನಿಸಲು ಅನುಮೋದನೆ ಕುರಿತ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ, ಮಂಡಳಿಯು ಹೊರಗುತ್ತಿಗೆ ಪದ್ಧತಿಯ ಯೋಜನೆಯನ್ನು ವಿಶ್ವವಿದ್ಯಾಲಯದಲ್ಲಿ ಕೈಬಿಡಲು ಮತ್ತು ಪ್ರಸ್ತುತವಾಗಿ ಜಾರಿಯಲ್ಲಿರುವ ಪದ್ಧತಿಯನ್ನು ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಹಿತದೃಷ್ಟಿಯಿಂದ ಮತ್ತು ಮಾನವೀಯತೆ ಆಧಾರದ ಮೇಲೆ ಮುಂದುವರೆಸುವಂತೆ ನಿರ್ದೇಶಿಸಿತು.<br>(ಕ್ರಮ : ಆಸ್ತಿ ಅಧಿಕಾರಿಗಳು/ಆಡಳಿತಾಧಿಕಾರಿಗಳು) |

| | |
|---|---|
| **Item No. 7** | **Approval to invite tender for engaging "C" & "D" group employees through outsourcing at UHS, Bagalkot.** |
| | **Discussion & Resolution :**<br>The Board examined proposal for inviting tender for engaging "C" & "D" group employees through outsourcing at UHS, Bagalkot. After detailed deliberations, the Board directed the University to drop the plan for outsourcing system in the University and to continue the existing system in the interest of the employees working in the University on contractual basis and on humanitarian grounds.<br>**(Action : Estate Officer/Administrative Officer)** |
| **ಕಾರ್ಯಸೂಚಿ ಸಂ.8** | **ತೋವಿವಿ, ಬಾಗಲಕೋಟೆಯ ಮುಖ್ಯ ಆವರಣದ ಮುಖ್ಯ ಪ್ರವೇಶ ದ್ವಾರ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಅನಮೋದನೆ ನೀಡುವ ಕುರಿತು..** |
| | **ಚರ್ಚೆ ಮತ್ತು ಠರಾವು :**<br>ತೋವಿವಿ, ಬಾಗಲಕೋಟೆಯ ಮುಖ್ಯ ಆವರಣದ ಮುಖ್ಯ ಪ್ರವೇಶ ದ್ವಾರ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಅನಮೋದನೆ ಕುರಿತ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ, ಮಂಡಳಿಯು ಪ್ರಸ್ತಾವನೆಯನ್ನು ಮುಂದಿನ ಸಭೆಗೆ ಮುಂದೂಡಿತು.<br>(ಕ್ರಮ : ಆಸ್ತಿ ಅಧಿಕಾರಿಗಳು) |
| **Item No.8** | **Approval to the additional and revised cost of main entrance gate of UHS, Bagalkot-reg.** |
| | **Discussion & Resolution :**<br>The Board examined the proposal for approval to the additional and revised cost of main entrance gate of UHS, Bagalkot. After detailed deliberations, the Board deferred the proposal to the next meeting.<br>**(Action : Estate Officer)** |
| **ಕಾರ್ಯಸೂಚಿ ಸಂ.9** | **ತೋವಿವಿ, ಬಾಗಲಕೋಟದಲ್ಲಿ ಅಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ಏಕರೂಪದ ವಿದ್ಯಾರ್ಹತೆ ಮತ್ತು ಸ್ಕೋರ್ ಕಾರ್ಡ್‌ಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಆದೇಶ ದಿ: 23-11-2018 ನ್ನು ಅಳವಡಿಸಿಕೊಳ್ಳುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ವಿಷಯವನ್ನು ಸುದೀರ್ಘವಾಗಿ ಚರ್ಚಿಸಿತು ಮತ್ತು ಅಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ಏಕರೂಪದ ವಿದ್ಯಾರ್ಹತೆ ಮತ್ತು ಸ್ಕೋರ್ ಕಾರ್ಡ್‌ಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಆದೇಶವನ್ನು ಅಳವಡಿಸಿಕೊಳ್ಳಲು ತನ್ನ ಅನುಮೋದನೆಯನ್ನು ನೀಡಿತು. ಮುಂದುವರೆದು, ಈ ಕುರಿತು ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ : ಕುಲಸಚಿವರು) |

| | |
|---|---|
| **Item No.9** | **Implementation of Govt. order regarding Common Qualification and Score Card for the post of Officers in UHS, Bagalkot.** |
| | **Discussion & Resolution :**<br>The Board discussed the subject at length and accorded its approval for the implementation of Govt. order regarding Common Qualification and Score Card for the post of Officers in UHS, Bagalkot. Further, Board directed the University to issue University notification in this regard.<br>**(Action: Registrar)** |
| **ಹೆಚ್ಚುವರಿ ಕಾರ್ಯಸೂಚಿ** | |
| **ADDITIONAL AGENDA** | |
| ಕಾರ್ಯಸೂಚಿ ಸಂ.1 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಮುಖ್ಯ ಆವರಣದ ಸರ್ವಜ್ಞ ಗ್ರಂಥಾಲಯಕ್ಕೆ **RFID (Radio Frequency Identification) Management System** ಖರೀದಿಸಿ ಅಳವಡಿಸಲು ಅನುಮೋದನೆ ಕುರಿತು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಮುಖ್ಯ ಆವರಣದ ಸರ್ವಜ್ಞ ಗ್ರಂಥಾಲಯಕ್ಕೆ RFID (Radio Frequency Identification) Management System ಖರೀದಿಸಿ ಅಳವಡಿಸಲು ಅನುಮೋದನೆ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಮುಖ್ಯ ಆವರಣದ ಸರ್ವಜ್ಞ ಗ್ರಂಥಾಲಯಕ್ಕೆ RFID (Radio Frequency Identification) Management System ಅವಶ್ಯಕತೆಯನ್ನು ಪರಿಗಣಿಸಿ, ಮಂಡಳಿಯು ಕಾರ್ಯಸೂಚಿಯಲ್ಲಿ ಮಂಡಿಸಿರುವಂತೆ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೇ ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>(ಕ್ರಮ : ಆಸ್ತಿ ಅಧಿಕಾರಿಗಳು/ವಿಶ್ವವಿದ್ಯಾಲಯದ ಗ್ರಂಥಪಾಲಕರು) |
| **Item No.1** | **Procurement of RFID (Radio Frequency Identification) Management System for Sarvajna Library at Main Campus, University of Horticultural Sciences, Bagalkot.** |
| | **Discussion & Resolution :**<br>The Board examined the proposal for Procurement of RFID (Radio Frequency Identification) Management System for Sarvajna Library at Main Campus, University of Horticultural Sciences, Bagalkot. After detailed deliberations and considering the essentiality of RFID (Radio Frequency Identification) Management System for |

| | |
|---|---|
| | Sarvajna Library at Main Campus, University of Horticultural Sciences, Bagalkot, Board accorded its approval for proposal as put up in the agenda and directed the University to invite the tender as per norms of UHS and KTPP Act, without waiting for confirmation of the minutes.<br><br>**(Action: Estate Officer/University Librarian)** |
| **ಕಾರ್ಯಸೂಚಿ ಸಂ.2** | **ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರಿಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ಈ ಬಗ್ಗೆ ವಿವರವಾದ ಚರ್ಚೆಯ ಅವಶ್ಯಕತೆ ಇರುವುದರಿಂದ ಮಂಡಳಿಯು ಈ ಕಾರ್ಯಸೂಚಿಯನ್ನು ಮುಂದೂಡಿತು ಮತ್ತು ಸದರಿ ಕಾರ್ಯಸೂಚಿಯನ್ನು ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>**(ಕ್ರಮ : ಕುಲಸಚಿವರು)** |
| **Item No.2** | **Approval for up-gradation of teachers under CAS-2006 Scheme.** |
| | **Discussion & Resolution :**<br><br>This item was deferred by the Board and directed the University to place the same in the next meeting of Board of Management, as it requires more time for discussion.<br><br>**(Action: Registrar)** |
| **ಕಾರ್ಯಸೂಚಿ ಸಂ.3** | **ತೋವಿವಿ, ಬಾಗಲಕೋಟದ ಅಡಿಯಲ್ಲಿ ಬರುವ ಕೇಂದ್ರಿಯ ಉಪಕರಣಗಳ ಪ್ರಯೋಗಾಲಯಕ್ಕೆ ವೈಜ್ಞಾನಿಕ ಉಪಕರಣಗಳನ್ನು ಪೂರೈಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ತೋವಿವಿ, ಬಾಗಲಕೋಟದ ಅಡಿಯಲ್ಲಿ ಬರುವ ಕೇಂದ್ರಿಯ ಉಪಕರಣಗಳ ಪ್ರಯೋಗಾಲಯಕ್ಕೆ ವೈಜ್ಞಾನಿಕ ಉಪಕರಣಗಳನ್ನು ಪೂರೈಸಲು ಅನುಮೋದನೆ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ ಮತ್ತು ಅವಶ್ಯಕತೆಯನ್ನು ಪರಿಗಣಿಸಿ, ಮಂಡಳಿಯು ಕಾರ್ಯಸೂಚಿಯಲ್ಲಿ ಮಂಡಿಸಿರುವಂತೆ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೇ ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br><br>**(ಕ್ರಮ : ಆಸ್ತಿ ಅಧಿಕಾರಿಗಳು/ಡೀನ್, ತೋಮವಿ, ಬಾಗಲಕೋಟ)** |

| | |
|---|---|
| **Item No.3** | **Approval for procurement of scientific equipments for "Central Instrumentation Laboratory" at Main Campus, UHS, Bagalkot.** |
| | **Discussion & Resolution :**<br><br>The Board examined the proposal for Approval for procurement of scientific equipments for "Central Instrumentation Laboratory" at Main Campus, UHS, Bagalkot. After detailed deliberations and considering the essentiality, Board accorded its approval for proposal as put up in the agenda and directed the University to invite the tender as per norms of UHS and KTPP Act, without waiting for confirmation of the minutes.<br><br>**(Action: Estate Officer/Dean, COH, Bagalkot)** |
| **ಕಾರ್ಯಸೂಚಿ ಸಂ.4** | **ತೋಟಗಾರಿಕೆ ಮಹಾವಿದ್ಯಾಲಯ, ಬೀದರ ಮತ್ತು ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು ಇಲ್ಲಿಗೆ ವೈಜ್ಞಾನಿಕ ಉಪಕರಣಗಳ ಖರೀದಿಗೆ ಅನುಮೋದನೆ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ತೋಟಗಾರಿಕೆ ಮಹಾವಿದ್ಯಾಲಯ, ಬೀದರ ಮತ್ತು ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು ಇಲ್ಲಿಗೆ ವೈಜ್ಞಾನಿಕ ಉಪಕರಣಗಳ ಖರೀದಿಗೆ ಅನುಮೋದನೆ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ, ಮಂಡಳಿಯು ಕಾರ್ಯಸೂಚಿಯಲ್ಲಿ ಮಂಡಿಸಿರುವಂತೆ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೇ ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br><br>(ಕ್ರಮ : ಆಸ್ತಿ ಅಧಿಕಾರಿಗಳು) |
| **Item No.4** | **Approval for procurement of scientific equipments for College of Horticulture, Bidar and College of Horticulture, Mysuru.** |
| | **Discussion & Resolution :**<br><br>The Board examined the proposal for procurement of scientific equipments for College of Horticulture, Bidar and College of Horticulture, Mysuru. After detailed deliberations, Board accorded its approval for proposal as put up in the agenda and directed the University to invite the tender as per norms of UHS and KTPP Act, without waiting for confirmation of the minutes.<br><br>**(Action: Estate Officer)** |

| | |
|---|---|
| **ಟೇಬಲ್ ಕಾರ್ಯಸೂಚಿ** | |
| **TABLE AGENDA** | |
| **ಕಾರ್ಯಸೂಚಿ ಸಂ.1** | **ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಉಪಯೋಗಕ್ಕಾಗಿ ಎಕೋ ಆಂಬುಲೆನ್ಸ್ ವಾಹನ ಖರೀದಿಸುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಉಪಯೋಗಕ್ಕಾಗಿ ಎಕೋ ಆಂಬುಲೆನ್ಸ್ ವಾಹನ ಖರೀದಿಸುವ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ, ಮಂಡಳಿಯು ಕಾರ್ಯಸೂಚಿಯಲ್ಲಿ ಮಂಡಿಸಿರುವಂತೆ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೇ ಖರೀದಿ/ವಿಶ್ವವಿದ್ಯಾಲಯಗಳನ್ನು ನಿಯಮಾವಳಿಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>(ಕ್ರಮ : ಆಸ್ತಿ ಅಧಿಕಾರಿಗಳು/ಡೀನ್, ತೋಮವಿ, ಕೋಲಾರ) |
| **Item No.1** | **Purchase of Eco Ambulance Vehicle for the use of College of Horticulture, Kolar under Honorable M.L.C. Areas Development Grant.** |
| | **Discussion & Resolution :**<br>The Board went through the proposal for Purchase of Eco Ambulance Vehicle for the use of College of Horticulture, Kolar under Honorable M.L.C. Areas Development Grant. After detailed deliberations, the Board accorded its approval for the same. Further, Board directed the University to take necessary action in this regard by following purchase procedures/University norms, without waiting for confirmation of the minutes.<br>**(Action: Estate Officer/Dean, COH, Kolar)** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇನ್ನಿತರ ವಿಷಯಗಳು ಮತ್ತು ಸಲಹೆಗಳು** | |
| **Any other items with permission of the Chair and suggestions** | |
| **ಕಾರ್ಯಸೂಚಿ ಸಂ.1** | ಮಂಡಳಿಯ ಸದಸ್ಯರುಗಳು ತೋವಿವಿ, ಬಾಗಲಕೋಟದ ತೋಟಗಾರಿಕೆ ಮೇಳ-2018 ರ ಖರ್ಚು ವೆಚ್ಚಗಳ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದರು. ಇದಕ್ಕೆ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ತೋಟಗಾರಿಕೆ ಮೇಳ-2018 ರ ಖರ್ಚು ವೆಚ್ಚಗಳ ವಿವರಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲಾಗುವುದು ಎಂದು ತಿಳಿಸಿದರು.<br>(ಕ್ರಮ: ವಿಸ್ತರಣಾ ನಿರ್ದೇಶಕರು) |
| **Item No.1** | Board members directed the University to submit the expenditure details of Totagarike Mela–2018 of UHS, Bagalkot. In response to this, Chairman and Member Secretary informed that, the expenditure details of Totagarike Mela – 2018 will be submitted in the ensuing meeting.<br>**(Action: Director of Extension)** |
| **ಕಾರ್ಯಸೂಚಿ ಸಂ.2** | ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು ಮುಖ್ಯ ಆವರಣದಲ್ಲಿರುವ ಪ್ರೇಕ್ಷಾಗೃಹಕ್ಕೆ ಖುರ್ಚಿ ಹಾಗೂ ಮ್ಯಾಟಿಂಗ್ ಇವುಗಳನ್ನು ಮೂಲ ಟೆಂಡರ್‌ನಲ್ಲಿ ಸೇರಿಸುವ ಬಗ್ಗೆ ವಿಚಾರಿಸಿದರು. ಇದಕ್ಕೆ ಆಸ್ತಿ ಅಧಿಕಾರಿಗಳು ಖುರ್ಚಿ ಹಾಗೂ ಮ್ಯಾಟಿಂಗ್ ಪ್ರತ್ಯೇಕವಾಗಿ ಖರೀದಿಸಬೇಕಾಗಿರುವುದರಿಂದ ಇವುಗಳನ್ನು ಮೂಲ ಟೆಂಡರ್‌ನಲ್ಲಿ ಸೇರಿಸಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು. |

| | |
|---|---|
| **Item No.2** | Dr. Y. B. Patil, Member enquired about the inclusion of Chairs and Matting to Auditorium of main Campus in the original tender. In response to this, Estate Officer informed in the meeting that, Chairs and Matting are not included in the original tender as it is required to be purchased by separated. |
| ಕಾರ್ಯಸೂಚಿ ಸಂ.3 | ಕಿತ್ತೂರ ರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ ಇಲ್ಲಿಗೆ ಅರೆಕಾಲಿಕ ಇಬ್ಬರು ವೈದ್ಯರು (ಪುರುಷ ಮತ್ತು ಮಹಿಳಾ) ಬದಲಿಗೆ ಒಬ್ಬ ವೈದ್ಯರನ್ನು ಪೂರ್ಣಕಾಲಿಕ ಅವಧಿಗೆ ತೆಗೆದುಕೊಳ್ಳಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು)** |
| **Item No.3** | Board suggested the University to engage one full time Doctor at Kittur Rani Chennamma College of Horticulture, Arabhavi instead of two part time Doctors (Gents & Lady).<br>**(Action: Registrar)** |
| ಕಾರ್ಯಸೂಚಿ ಸಂ.4 | ಸದಸ್ಯರಾದ ಶ್ರೀ ಆರ್. ಚೌಡಾ ರೆಡ್ಡಿ ತೂಪಲ್ಲಿ ಇವರು ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯದ ಕಟ್ಟಡಗಳ ನಿರ್ಮಾಣದ ಜವಾಬ್ದಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲು ಮತ್ತು ಈ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚಿಸಲು ಸಂಬಂಧಪಟ್ಟ ವಿವರಗಳನ್ನು ತಮಗೆ ನೀಡಲು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು.<br>**(ಕ್ರಮ:ಆಸ್ತಿ ಅಧಿಕಾರಿಗಳು/ಕುಲಸಚಿವರು)** |
| **Item No.4** | Sri R. Chowda Reddy Thoopally, Member suggested the University to entrust the responsibility of construction of CHEFT buildings to Karnataka Housing Board and to submit the related documents to him for discussions in the Government level in this regard.<br>**(Action: Estate Officer/Registrar)** |
| ಕಾರ್ಯಸೂಚಿ ಸಂ.5 | ಕೃತೋವಿವಿ, ಶಿವಮೊಗ್ಗದಲ್ಲಿರುವಂತೆ ಕ್ಷೇತ್ರ ಅಭಿವೃದ್ಧಿ ಸಮಿತಿ ಮತ್ತು ಕಾಮಗಾರಿ ಸಮಿತಿ ಇವುಗಳನ್ನು ತೋವಿವಿ, ಬಾಗಲಕೋಟದಲ್ಲಿ ರಚಿಸಲು ಮಂಡಳಿಯ ಸದಸ್ಯರುಗಳು ವಿಶ್ವವಿದ್ಯಾಲಯಕ್ಕೆ ಸೂಚಿಸಿದರು. ಸರ್ಕಾರದ ಸುತ್ತೋಲೆ ದಿ: 27-10-2018 ರನ್ವಯ ಯಾವುದೇ ಸಮಿತಿಗಳ ರಚನೆಯ ಅವಶ್ಯಕತೆ ಇಲ್ಲದಿರುವುದನ್ನು ಸದಸ್ಯರುಗಳ ಗಮನಕ್ಕೆ ತರಲಾಯಿತು. ಆದಾಗ್ಯೂ ಮಂಡಳಿಯ ಸದಸ್ಯರುಗಳು ಸದರಿ ಸಮಿತಿಗಳನ್ನು ಕೃತೋವಿವಿ, ಶಿವಮೊಗ್ಗದಲ್ಲಿರುವಂತೆ ರಚಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿದರು. ಸದರಿ ನಿರ್ಧಾರವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>**(ಕ್ರಮ : ಕುಲಸಚಿವರು)** |
| **Item No.5** | The Board members directed the University to constitute the Farm Development Committee and Works Committee at UHS, Bagalkot in line with UAHS, Shivamoga. The Board members were informed about the decision of the Government vide dated 27-10-2018 there is no need to appoint any committees. In spite of that, the members directed the University to constitute the said committees in line with UAHS, Shivamoga. The Board directed the University to submit the decision to the Government for approval.<br>**(Action: Registrar)** |

| | |
|---|---|
| ಕಾರ್ಯಸೂಚಿ ಸಂ.6 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಯ 06 ಅಧಿಕಾರೇತರ ಸದಸ್ಯರುಗಳಿಗೆ ಮತ್ತು ಡಾ. ಅಶೋಕ ಆಲೂರ, ವಿಶೇಷಾಧಿಕಾರಿಗಳು, ಕುಲಪತಿಗಳ ಪ್ರಾದೇಶಿಕ ಕಛೇರಿ, ತೋಮವಿ, ಬೆಂಗಳೂರು ಪ್ರವಾಸ ಮುಖ್ಯಸ್ಥರನ್ನು ಒಳಗೊಂಡಂತೆ (6+1) ನೆದರ್‌ಲ್ಯಾಂಡಿನಲ್ಲಿರುವ ತೋಟಗಾರಿಕೆ ವಲಯದಲ್ಲಿ ನಿಖರವಾದ ಮತ್ತು ಇನ್ನಿತರ ಮುಂದುವರಿದ ತಂತ್ರಜ್ಞಾನಗಳನ್ನು ಅಧ್ಯಯನ ಮಾಡಲು ಏಪ್ರಿಲ್, 2019ರಲ್ಲಿ 08 ದಿನಗಳ ನೆದರ್‌ಲ್ಯಾಂಡ್ ಅಧ್ಯಯನ ಪ್ರವಾಸವನ್ನು ಆಯೋಜಿಸಲು ಸರ್ಕಾರದ ಅನುಮೋದನೆ ಪಡೆಯಲು ಪ್ರಯತ್ನ ಮಾಡಲು ಮತ್ತು ವಿಶ್ವವಿದ್ಯಾಲಯದಿಂದ ಸೂಕ್ತ ವ್ಯವಸ್ಥೆಗಳನ್ನು ಕೈಗೊಳ್ಳಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>**(ಕ್ರಮ: ವಿಶೇಷ ಅಧಿಕಾರಿಗಳು, ಕುಲಪತಿಗಳ ಪ್ರಾದೇಶಿಕ ಕಛೇರಿ, ಬೆಂಗಳೂರು)** |
| **Item No.6** | Board directed the University to make efforts for getting approval from the Government and to make necessary arrangements by the University to organize the Study Tour of six non-official members of Board of Management, UHS, Bagalkot including one Tour Leader Dr. Ashok Alur, Special Officer, VC's Regional Office, COH, Bengaluru (6+1) to Netherland to study the innovations in precision horticulture and various advanced technologies in horticulture sector in Netherland for 08 days during the month of April, 2019.<br>**(Action: Special Officer, VC's Regional Office, COH, Bengaluru)** |
| ಕಾರ್ಯಸೂಚಿ ಸಂ.7 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಯ 06 ಅಧಿಕಾರೇತರ ಸದಸ್ಯರುಗಳಿಗೆ ಮತ್ತು ಓರ್ವ ಪ್ರವಾಸ ಮುಖ್ಯಸ್ಥ ಡಾ. ಕುಲಪತಿ ಹಿಪ್ಪರಗಿ, ಪ್ರಾಧ್ಯಾಪಕರು, ತೋಮವಿ, ಬಾಗಲಕೋಟ ಇವರನ್ನು ಒಳಗೊಂಡಂತೆ (6+1) ಆಂಧ್ರ ಪ್ರದೇಶ ಮತ್ತು ಓರಿಸ್ಸಾದ ತೋಟಗಾರಿಕೆ ವಲಯದಲ್ಲಿ ನಿಖರವಾದ ಮತ್ತು ಇನ್ನಿತರ ಮುಂದುವರಿದ ತಂತ್ರಜ್ಞಾನಗಳನ್ನು ಅಧ್ಯಯನ ಮಾಡಲು ಅಧ್ಯಯನ ಪ್ರವಾಸವನ್ನು ಫೆಬ್ರವರಿ/ಮಾರ್ಚ್, 2019 ರಲ್ಲಿ ಆಯೋಜಿಸಲು ಮುಂಚಿತವಾಗಿಯೇ ವಿಶ್ವವಿದ್ಯಾಲಯದಿಂದ ಅಗತ್ಯ ವ್ಯವಸ್ಥೆಗಳನ್ನು ಕೈಗೊಳ್ಳಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>**(ಕ್ರಮ: ಡಾ. ಕುಲಪತಿ ಹಿಪ್ಪರಗಿ, ಪ್ರಾಧ್ಯಾಪಕರು, ತೋಮವಿ, ಬಾಗಲಕೋಟ)** |
| **Item No.7** | Board directed the University to make necessary arrangements by the University to organize the Study Tour of six non-official members of Board of Management, UHS, Bagalkot including one Tour Leader Dr. Kulapati Hipparagi, Professor, COH, Bagalkot (6+1) to Andhra Pradesh and Orissa to study the innovations in precision horticulture and various advanced technologies in horticulture sector in Andhra Pradesh and Orissa during the month of February/March, 2019.<br>**(Action: Dr. Kulapati Hipparagi, Professor, COH, Bagalkot)** |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ

**Registrar & Member Secretary**
**Board of Management, UHS, Bagalkot**